# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 168 (1575)

ಸದಸ್ಯರ ಹೆಸರು : ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ದಿನಾಂಕ : 18.03.2026

ಉತ್ತರಿಸುವ ಸಚಿವರು : ಕಂದಾಯ ಸಚಿವರು.

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಮತ್ತು ಎಸಿ ಕಚೇರಿಗಳಲ್ಲಿ ಎಷ್ಟು ಭೂ ಪರಿವರ್ತನೆ ಮತ್ತು ಕಂದಾಯ ಸಂಬಂಧಿತ ಅರ್ಜಿಗಳು ಬಾಕಿ ಇವೆ; (ಮಾಹಿತಿ ನೀಡುವುದು)</td><td>ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಸ್ತುತ ಭೂ ಪರಿವರ್ತನೆಗೆ ಸಂಬಂಧಿಸಿದಂತೆ ಯಾವುದೇ ಮನವಿಗಳು ಬಾಕಿ ಇರುವುದಿಲ್ಲ. ಕಂದಾಯ ಸಂಬಂಧಿತ ಬಾಕಿ ಇರುವ ಅರ್ಜಿಗಳ ಮಾಹಿತಿಯನ್ನು ಈ ಕೆಳಕಂಡಂತೆ ನಮೂದಿಸಲಾಗಿದೆ.
<table>
<tr><th>ತಾಲ್ಲೂಕು</th><th>ಮನವಿಗಳು</th></tr>
<tr><td>ಬೆಂ ಉತ್ತರ ತಾಲ್ಲೂಕು</td><td>40</td></tr>
<tr><td>ಬೆಂಗಳೂರು ದಕ್ಷಿಣ ತಾಲ್ಲೂಕು</td><td>38</td></tr>
<tr><td>ಬೆಂ.ಪೂರ್ವ ತಾಲ್ಲೂಕು</td><td>35</td></tr>
<tr><td>ಯಲಹಂಕ</td><td>50</td></tr>
<tr><td>ಆನೇಕಲ್</td><td>24</td></tr>
<tr><td>ಒಟ್ಟು</td><td>203</td></tr>
</table></td></tr>
<tr><td>ಆ)</td><td>ಜಾತಿ ಆದಾಯ ಮತ್ತು ನಿವಾಸ ಪ್ರಮಾಣ ಪತ್ರ ಅರ್ಜಿಗಳನ್ನು ವಿಲೇವಾರಿ ಮಾಡಲು ತೆಗೆದುಕೊಳ್ಳುವ ಸರಾಸರಿ ಸಮಯ ಎಷ್ಟು;</td><td>ಜಾತಿ ಆದಾಯ ಮತ್ತು ನಿವಾಸ ಪ್ರಮಾಣ ಪತ್ರ ಸಕಾಲ ಯೋಜನೆಯಡಿಯಲ್ಲಿ ಸಂಬಂಧಪಟ್ಟ ಕಛೇರಿಯಿಂದ ಜಾತಿ ಆದಾಯ ಅರ್ಜಿಗಳನ್ನು 21 ದಿನಗಳು ಮತ್ತು ನಿವಾಸ ಪ್ರಮಾಣ ಪತ್ರ ಅರ್ಜಿಗಳನ್ನು 14 ದಿನಗಳ ಒಳಗಾಗಿ ವಿಲೇವಾರಿ ಮಾಡಲಾಗುತ್ತಿದೆ.</td></tr>
<tr><td>ಇ)</td><td>ಖಾತಾ ವರ್ಗಾವಣೆ ಮತ್ತು ಭೂ ದಾಖಲೆ ನವೀಕರಣಗಳಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರಿಪಡಿಸಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ; (ಮಾಹಿತಿ ನೀಡುವುದು)</td><td>ನೋಟೀಸು ರಹಿತ 09 ರೀತಿಯ (ಹಕ್ಕು & ಋಣ, ಪೋಡಿ, ಭೂ ಪರಿವರ್ತನೆ, ಪೋಡಿ, ಭೂಸ್ವಾಧೀನ, ಕೋರ್ಟ್ ಆದೇಶ, ಕೋರ್ಟ್ ತಡೆ/ತಡೆ ಬಿಡುಗಡೆ, ಸರ್ಕಾರಿ ಆದೇಶ, ಸಾಗುವಳಿದಾರರು ಮತ್ತು ಪಹಣಿ ವರ್ಗಾವಣೆ) ಮ್ಯುಟೇಶನ್‌ಗಳು ಸ್ವಯಂ ಚಾಲಿತವಾಗಿ ಸ್ವಯಂ ಚಾಲಿತವಾಗಿ ಅನುಮೋದನೆಯಾಗುವಂತೆ ತಂತ್ರಾಂಶದಲ್ಲಿ ಮಾರ್ಪಡಿಸಲಾಗಿದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂ ಇ 214 ಟಿಆರ್‌ಎಂ 2025, ದಿನಾಂಕ: 27.12.2025 ರಂತೆ ಎಲ್ಲಾ 07 ದಿನಗಳ (ನೋಂದಾಯಿತ) ಹಾಗೂ 15 ದಿನಗಳ (ನೋಂದಾಯಿತವಲ್ಲದ) ನೋಟೀಸ್ ಅವಧಿ ಹೊಂದಿರುವ ಮ್ಯುಟೇಶನ್‌ಗಳನ್ನು ನೋಟೀಸ್ ಅವಧಿಯು ಮುಕ್ತಾಯವಾದ ನಂತರ ತಂತ್ರಾಂಶದ ಮೂಲಕ ಯಾವುದೇ ಮಾನವ ಹಸ್ತಕ್ಷೇಪವಿಲ್ಲದೆ ಸರ್ವರ್ ಸಹಿ ಮೂಲಕ ಸ್ವಯಂ ಚಾಲಿತವಾಗಿ ಅನುಮೋದನೆಯಾಗುವಂತೆ ಭೂಮಿ ತಂತ್ರಾಂಶದಲ್ಲಿ ಮಾರ್ಪಾಡು ಮಾಡಲಾಗಿದೆ. ನೋಟೀಸು ಅವಧಿ ಹೊಂದಿರುವ ಮ್ಯುಟೇಶನ್‌ಗಳು ಕ್ರಮ, ವಿಭಾಗ, ದಾನ, ಪೌತಿ, ವಿಲ್ ಮುಂತಾದವು ಸಹ ಸ್ವಯಂಚಾಲಿತವಾಗಿ ಅನುಮೋದನೆಯಾಗುತ್ತವೆ.</td></tr>
</table>

| | | |
|---|---|---|
| | | ಮುಂದುವರಿದು, 07 ಕೆಲಸದ ದಿನಗಳು ಅಥವಾ 15 ಕೆಲಸದ ದಿನಗಳ ನೋಟೀಸು ಅವಧಿಯೊಳಗೆ ಕಂದಾಯ ನಿರೀಕ್ಷಕರು (ಸರ್ಕಾರಿ ಆಕ್ಷೇಪ) ಅಥವಾ ಸಾರ್ವಜನಿಕರು ಯಾವುದೇ ತಕರಾರು ನೀಡಿದ್ದಲ್ಲಿ, ಸದರಿ ಮ್ಯುಟೇಶನ್‌ನ್ನು ಪೂರ್ಣಗೊಳಿಸದೆ, ಆರ್.ಸಿ.ಸಿ.ಎಂ.ಎಸ್. ತಂತ್ರಾಂಶದ ತಹಶೀಲ್ದಾರರ ನ್ಯಾಯಾಲಯಕ್ಕೆ ಸದರಿ ಪ್ರಕರಣ ವರ್ಗಾಯಿಸಲಾಗುತ್ತದೆ. ನಂತರ ತಹಶೀಲ್ದಾರರ ನಿರ್ಧಾರದಂತೆ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ.<br><br>ಈ ಹಿಂದೆ ಮ್ಯುಟೇಶನ್‌ಗಳಿಗೆ ಆಕ್ಷೇಪಣೆ ಇದ್ದಲ್ಲಿ ಅಥವಾ ಅನುಮೋದನೆ ನೀಡಬೇಕಾದಲ್ಲಿ, ರಾಜಸ್ವ ನಿರೀಕ್ಷರು ತಾಲ್ಲೂಕ ಕಛೇರಿಗೆ ಬಂದು ಸಲ್ಲಿಸಬೇಕಾಗುತ್ತಿತ್ತು, ಆದರೆ ಪ್ರಸ್ತುತ ರಾಜಸ್ವ ನಿರೀಕ್ಷಕರಿಗೆ ಲಾಗಿನ್ ನೀಡಲಾಗಿರುವುದರಿಂದ ಯಾವುದೇ ಸ್ಥಳದಿಂದ ಆಕ್ಷೇಪಣೆ ಸಲ್ಲಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ ಹಾಗೂ ಮ್ಯುಟೇಶನ್ ಸ್ವಯಂ ಚಾಲಿತವಾಗಿ ಅನುಮೋದನೆಯಾಗುತ್ತದೆ.<br><br>ಭೂಮಿ ತಂತ್ರಾಂಶದಲ್ಲಿ ಸರ್ಕಾರಿ ಜಮೀನುಗಳು, ಸರ್ಕಾರಿ ನಿಬಂಧನೆ ಇರುವ ಜಮೀನುಗಳು ಹಾಗೂ ಪಿ.ಟಿ.ಸಿ.ಎಲ್. ಕಾಯ್ದೆ ವ್ಯಾಪ್ತಿಗೆ ಬರುವ ಜಮೀನುಗಳು ಫ್ಲ್ಯಾಗ್ ಮಾಡಲಾಗಿರುವುದರಿಂದ ಇಂತಹ ಜಮೀನುಗಳನ್ನು ನೋಂದಣಿ ಮಾಡಲು ಸಾಧ್ಯವಾಗುವುದಿಲ್ಲ, ಆದ್ದರಿಂದ ಇಂತಹ ಜಮೀನುಗಳ ಸ್ವಯಂ ಚಾಲಿತ ಮ್ಯುಟೇಶನ್ ವ್ಯಾಪ್ತಿಗೆ ಬರುವುದಿಲ್ಲ.<br><br>ಅಲ್ಲದೇ, ಮ್ಯುಟೇಶನ್ ಪೂರ್ಣಗೊಂಡ ನಂತರ ಸಂಬಂಧಪಟ್ಟವರಿಗೆ ಎಸ್.ಎಂ.ಎಸ್. ಮೂಲಕ ಮಾಹಿತಿಯನ್ನು ನೀಡಲಾಗುತ್ತದೆ ಹಾಗೂ ನೋಟೀಸುಗಳನ್ನು ಇ-ಚಾವಡಿ ತಂತ್ರಾಂಶದಲ್ಲಿ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ. |
| ಈ) | ಡಿ.ಸಿ ಮತ್ತು ಎಸಿ ಕಚೇರಿಗಳಲ್ಲಿ ಭ್ರಷ್ಟಾಚಾರ ಮತ್ತು ಮಧ್ಯವರ್ತಿಗಳ ಹಸ್ತಕ್ಷೇಪವನ್ನು ತಡೆಯಲು ಸರ್ಕಾರದಿಂದ ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ; | ಆಸ್ತಿ ಮಾಲೀಕತ್ವಕ್ಕೆ ಖಚಿತತೆ, ಗೊಂದಲ ನಿವಾರಣೆ, ಸಮಸ್ಯೆಗಳಿಗೆ ಪರಿಹಾರ, ಒದಗಿಸುವ ಕುರಿತು ಹಾಗೂ ಭ್ರಷ್ಟಾಚಾರ ಮತ್ತು ಮಧ್ಯವರ್ತಿಗಳ ಹಸ್ತಕ್ಷೇಪವನ್ನು ತಡೆಯಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. |
| ಉ) | ಸಾರ್ವಜನಿಕ ಕುಂದುಕೊರತೆಗಳನ್ನು ಕಡಿಮೆ ಮಾಡಲು ಮತ್ತು ಕಂದಾಯ ಕಚೇರಿಗಳಲ್ಲಿ ಸೇವಾ ವಿತರಣೆಯನ್ನು ಸುಧಾರಿಸಲು ಸರ್ಕಾರ ಯಾವ ಕ್ರಮಗಳನ್ನು ಜಾರಿಗೆ ತರಲು ಉದ್ದೇಶಿಸಿದೆ; | **ಇ-ಆಫೀಸ್ (ಕಾಗದ ರಹಿತ ಆಡಳಿತ):** ಕಡತಗಳ ನಿರ್ವಹಣೆ, ಅನುಮೋದನೆ ಹಾಗೂ ಪತ್ರ ಮತ್ತು ಕಡತಗಳ ಚಲನ-ವಲಯ ಪ್ರಕ್ರಿಯೆಗಳನ್ನು ಸುರಕ್ಷಿತ, ತ್ವರಿತ ಹಾಗೂ ಪಾರದರ್ಶಕಗೊಳಿಸಲು ಇ-ಆಫೀಸ್ ಅನ್ನು ಜಾರಿಗೊಳಿಸಲಾಗಿದೆ.<br><br>**ಭೂ ಸುರಕ್ಷಾ (ಮೂಲ ದಾಖಲೆಗಳ ಗಣಕೀಕರಣ):**- ಹಳೆಯ, ಹಾಳಾಗುವ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ, ಸುರಕ್ಷಿತಗೊಳಸಲು ಮತ್ತು ತಿದ್ದಲು ಹಾಗೂ ಕಳೆದು ಹೋಗಲು ಯಾವುದೇ ಅವಕಾಶ ಇರದಂತೆ ಮೂಲ ದಾಖಲೆಗಳನ್ನು ಗಣಕೀರಕಣಗೊಳಿಸಲಾಗುತ್ತಿದೆ.<br><br>**ನನ್ನ ಭೂಮಿ (ಹಳೆ ಭೂ ಮಂಜುರಾತಿಗಳಿಗೆ ಪಕ್ಕಾ, ದಾಖಲೆ, ದುರಸ್ತ ಪೋಡಿ)**:<br><br>ದರ್ಖಾಸ್ತು ಭೂಮಿಗಳ ಹಂಚಿಕೆ ಮತ್ತು ಪೋಡಿ ಪ್ರಕ್ರಿಯೆಯನ್ನು ಸರಳಗೊಳಿಸಿ ತ್ವರಿತಗೊಳಿಸಲು ಈ ಯೋಜನೆಯನ್ನು ಜಾರಿಗೆ ತರಲಾಗಿದೆ. |

<table>
<tr>
<td></td>
<td></td>
<td>ಕಂದಾಯ ಗ್ರಾಮ (ದಾಖಲೆ ರಹಿತ ಗ್ರಾಮ ವಾಸಿಗಳಿಗೆ ಪಕ್ಕ ಹಕ್ಕು ಪತ್ರ):<br>ಹಲವಾರು ವರ್ಷಗಳಿಂದ ರಾಜ್ಯದಲ್ಲಿ ನೆಲಗೊಂಡಿರುವ ದಾಖಲೆ ರಹಿತ ಜನವಸತಿಗಳಾದ ತಾಂಡ, ಹಟ್ಟಿ, ಹಾಡಿ, ದೊಡ್ಡಿ, ಪಾಳ್ಯ, ಮಜರೆ, ಕ್ಯಾಂಪ್, ಕಾಲೋನಿ ಇತ್ಯಾದಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ವಾಸದ ಮನೆಗಳ ಹಕ್ಕು ದಾಖಲೆ ಇಲ್ಲದೇ ಇರುವುದರಿಂದ ಅನೇಕ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿರುವ ಇಂತಹ ಗ್ರಾಮಗಳನ್ನು ಗುರುತಿಸಿ, ಕಂದಾಯ ಗ್ರಾಮಗಳಾಗಿ ಘೋಷಿಸಿ ಅಲ್ಲಿನ ದಾಖಲೆರಹಿತ ನಿವಾಸಿಗಳಿಗೆ ಹಕ್ಕುದಾಖಲೆ ನೀಡುವ ಬಗ್ಗೆ ಜಾರಿಗೆ ತರಲಾಗಿದೆ.<br><br>ಭೂ ನ್ಯಾಯ (ಬಾಕಿ ಕಂದಾಯ ನ್ಯಾಯಾಲಯ ಪ್ರಕರಣಗಳ ತ್ವರಿತ ವಿಲೇ):<br>ಆನ್‌ಲೈನ್ ಮೇಲ್ಮನವಿ, ಡಿಜಿಟಲ್ ನೋಟಿಸ್, ವಿಚಾರಣೆ ಮಾಹಿತಿ ಮತ್ತು ಅಂತಿಮ ಆದೇಶಗಳಿಗಾಗಿ ಸುರಕ್ಷಿತ ವೇದಿಕೆ ಒದಗಿಸಲಾಗಿದೆ.<br><br>ಆಟೋ ಮ್ಯುಟೇಷನ್ (ತಕ್ಷಣ ಖಾತೆ ಬದಲಾವಣೆ):<br>ಹಕ್ಕು ಮತ್ತು ಋಣ, ಭೂ ಸ್ವಾಧೀನ, ಭೂ ಪರಿವರ್ತನೆ, ನ್ಯಾಯಾಲಯ ಆದೇಶ, ನ್ಯಾಯಾಲಯ ತಡೆ, ಪೋಡಿ, ಆರ್‌ಟಿಸಿ ಚಲನೆ, ಸಾಗುವಳಿದಾರರ ತಿದ್ದುಪಡಿ ಮತ್ತು ಸರ್ಕಾರಿ ಆದೇಶ-ಮಂಜೂರಿ ಪ್ರಕರಣಗಳು. ಈ ಒಂಬತ್ತು ಪ್ರಕಾರದ ಮ್ಯುಟೇಶನ್‌ಗಳು ಈಗ ಸ್ವಯಂಚಾಲಿತವಾಗಿ ನಡೆಯುವುದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಗಿದೆ.<br><br>ಲ್ಯಾಂಡ್ ಬೀಟ್ (ಸರ್ಕಾರಿ ಆಸ್ತಿಗಳ ರಕ್ಷಣೆ):<br>ಸರ್ಕಾರಿ ಜಮೀನುಗಳನ್ನು ಗುರುತಿಸಿ ಜಿಯೋ ಟ್ಯಾಗ್ ಹಾಗೂ ಜಿಯೋ ಫೆನ್ಸಿಂಗ್ ಮಾಡಿ ಒತ್ತುವರಿಗಳಿಂದ ಸರ್ಕಾರಿ ಜಮೀನುಗಳನ್ನು ಸಂರಕ್ಷಿಸಲಾಗುತ್ತಿದೆ.</td>
</tr>
<tr>
<td>ಊ)</td>
<td>ಬೆಂಗಳೂರು ನಗರ ಜಿಲ್ಲಾಧಿಕಾರಿ ಮತ್ತು ಎಸಿ ಕಚೇರಿಗಳಲ್ಲಿ ಸಿಬ್ಬಂದಿ ಕೊರತೆ ಇದೆಯೇ; ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು; (ವಿವರಗಳನ್ನು ಒದಗಿಸುವುದು)</td>
<td>ಬೆಂಗಳೂರು ನಗರ ಜಿಲ್ಲಾ ಕಂದಾಯ ಘಟಕದ ಜಿಲ್ಲಾಧಿಕಾರಿಗಳ ಕಛೇರಿ ಮತ್ತು ಉಪ ವಿಭಾಗಾಧಿಕಾರಿಗಳ ಕಛೇರಿಯಗಳಲ್ಲಿ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.<br><table>
<tr><th>ಕಛೇರಿ</th><th>'ಸಿ'ವೃಂದ</th><th>'ಡಿ' ವೃಂದ</th></tr>
<tr><td>ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ</td><td>16</td><td>07</td></tr>
<tr><td>ಉಪ ವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ</td><td>03</td><td>03</td></tr>
<tr><td>ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ</td><td>07</td><td>02</td></tr>
<tr><td>ಒಟ್ಟು</td><td>26</td><td>12</td></tr>
</table></td>
</tr>
<tr>
<td>ಋ)</td>
<td>ಬೆಂಗಳೂರಿನಲ್ಲಿ ಹೆಚ್ಚಾಗುತ್ತಿರುವ ಕೆಲಸದ ಹೊರೆಯಿಂದಾಗಿ ಎಸಿ ಕಚೇರಿಗಳಲ್ಲಿ ಮೂಲಸೌಕರ್ಯ ಮತ್ತು ಮಾನವ ಶಕ್ತಿಯನ್ನು ಬಲಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ</td>
<td>ಬೆಂಗಳೂರು ನಗರ ಜಿಲ್ಲೆಯ ಅರೆ ನ್ಯಾಯಿಕ ಪ್ರಕರಣಗಳನ್ನು ಸುಗಮವಾಗಿ ನಿರ್ವಾಹಣೆ ಮಾಡಲು ಒಟ್ಟು 8 ವಿಶೇಷ ಜಿಲ್ಲಾಧಿಕಾರಿಗಳನ್ನು ನೇಮಿಸಲಾಗಿದೆ ಮತ್ತು ವಿಶೇಷ ಜಿಲ್ಲಾಧಿಕಾರಿ ರವರಿಗೆ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಹೆಚ್ಚುವರಿಯಾಗಿ ನಿಯೋಜಿಸಲಾಗಿದೆ.</td>
</tr>
</table>

| | | |
|---|---|---|
| | | ಬೆಂಗಳೂರು ನಗರ ಜಿಲ್ಲೆಯ ಉಪ ವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ/ದಕ್ಷಿಣ ಉಪ ವಿಭಾಗಕ್ಕೆ ಸಂಬಂಧಿಸಿದ ಅರೆ ನ್ಯಾಯಿಕ ಪ್ರಕರಣಗಳ ನಿರ್ವಹಣೆ ಮಾಡಲು ಒಟ್ಟು 11 ವಿಶೇಷ ಉಪ ವಿಭಾಗಾಧಿಕಾರಿಗಳನ್ನು ನೇಮಿಸಲಾಗಿದೆ ಮತ್ತು ವಿಶೇಷ ಉಪ ವಿಭಾಗಾಧಿಕಾರಿ ರವರುಗಳಿಗೆ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಹೆಚ್ಚುವರಿಯಾಗಿ ನಿಯೋಜಿಸಲಾಗಿದೆ ಮತ್ತು ಮಾನವ ಶಕ್ತಿಯನ್ನು ಬಲಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

ಸಂಖ್ಯೆ: ಆರ್‌ಡಿ 61 ಎಲ್‌ಜಿಕ್ಯೂ 2026.

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು